# ಕರ್ನಾಟಕ ಪರೀಕ್ಷಾ ಪ್ರಾಧಿಕಾರ
# Karnataka Examinations Authority

ಸಂಖ್ಯೆ: ಇಡಿ/ಕೆಇಎ/ಪತ್ರಿಕಾ ಪ್ರಕಟಣೆ/2019 ದಿನಾಂಕ: 28-08-2019

## ಪತ್ರಿಕಾ ಪ್ರಕಟಣೆ

ಆಯುಷ್ ಕೋರ್ಸುಗಳಿಗೆ – ಎರಡನೇ ಹಾಗು ಅಂತಿಮ ಸುತ್ತಿನ ಸೀಟು ಹಂಚಿಕೆ (ಪರಿಷ್ಕರಿಸಿದ ವೇಳಾಪಟ್ಟಿ)

UGNEET-2019 ಆಧಾರದ ಮೇಲೆ ಆಯುಷ್ ಕೋರ್ಸುಗಳಿಗೆ (ಆಯುರ್ವೇದ, ಯೋಗ-ನ್ಯಾಚುರೋಪತಿ, ಯುನಾನಿ, ಹೋಮಿಯೋಪತಿ ಸೀಟುಗಳು) ಎರಡನೇ ಹಾಗು ಅಂತಿಮ ಸುತ್ತಿನ ಸೀಟು ಹಂಚಿಕೆಯನ್ನು ಮುಂದೂಡಲಾಗಿತ್ತು. ಸದರಿ ಕೋರ್ಸುಗಳಿಗೆ ಸೀಟು ಹಂಚಿಕೆಯನ್ನು ಈ ಕೆಳಗಿನ ಪರಿಷ್ಕೃತ ವೇಳಾಪಟ್ಟಿಯಂತೆ ನಡೆಸಲಾಗುವುದು. ಲಭ್ಯವಿರುವ ಸೀಟುಗಳ ವಿವರಗಳು ಅಂದರೆ, ಕಾಲೇಜುವಾರು, ಕ್ಯಾಟಗರಿವಾರು ಮತ್ತು ಕೋರ್ಸುವಾರು ವಿವರಗಳನ್ನು ಪ್ರಾಧಿಕಾರದ ವೆಬ್‌ಸೈಟಿನಲ್ಲಿ ಪ್ರಕಟಿಸಲಾಗುವುದು.

**ಭಾರತ ಸರ್ಕಾರದ ಕೋಟದಲ್ಲಿ ಭರ್ತಿಯಾಗದೇ ಉಳಿದಿರುವ ಖಾಸಗಿ ಕೋಟದ ಸೀಟು ಹಂಚಿಕೆ**

ಮುಂದುವರಿದು ಭಾರತ ಸರ್ಕಾರದ ಕೋಟದಲ್ಲಿ ಹಂಚಿಕೆಯಾಗದೆ ಉಳಿದಿರುವ ಖಾಸಗಿ ಕಾಲೇಜುಗಳಲ್ಲಿನ ಖಾಸಗಿ ಕೋಟದ ಸೀಟುಗಳನ್ನು ಆಯುಷ್ ನಿರ್ದೇಶನಾಲಯದವರು ನೀಡಿರುತ್ತಾರೆ. ಸದರಿ ಸೀಟುಗಳನ್ನೂ ಸಹ ಈ ಸುತ್ತಿನಲ್ಲಿ ಹಂಚಿಕೆಗೆ ಪರಿಗಣಿಸಲಾಗುವುದು. ಖಾಸಗಿ ಕಾಲೇಜುಗಳಲ್ಲಿನ ಖಾಸಗಿ ಕೋಟದ ಸೀಟುಗಳಿಗೆ ಶುಲ್ಕ ರೂ.2,00,000/- p.a. (HFW 63 PTD 2019 Dated 11-07-2019) ಈ ಸೀಟುಗಳನ್ನು ಆಯ್ಕೆ ಮಾಡುವ ಮೊದಲು ಅಭ್ಯರ್ಥಿಗಳು ಪೋಷಕರೊಂದಿಗೆ ಚರ್ಚಿಸಿ ದಾಖಲಿಸಲು ಸೂಚಿಸಿದೆ.

ಈಗಾಗಲೇ ಆನ್‌ಲೈನ್ ಮೂಲಕ ಅರ್ಜಿಗಳನ್ನು ಸಲ್ಲಿಸಿ ನೀಟ್ ರೋಲ್ ನಂಬರ್ ಅನ್ನು ನಮೂದಿಸಿ, ಯುಜಿಸಿಇಟಿ ಅಥವಾ ಯುಜಿನೀಟ್ ರಲ್ಲಿ ದಾಖಲಾತಿ ಪರಿಶೀಲನೆ ಮಾಡಿಕೊಂಡಿರುವವರು ಮಾತ್ರ ಆಯುಷ್ ಕೋರ್ಸುಗಳಿಗೆ ಅರ್ಹತೆಯನ್ನು ಪಡೆಯುತ್ತಾರೆ.

1. ಆಯುಷ್ ಕೋರ್ಸುಗಳಿಗೆ Choice-2 ನೀಡಿರುವ ಅಭ್ಯರ್ಥಿಗಳು (ಶುಲ್ಕ ಪಾವತಿಸಿದ್ದಲ್ಲಿ ಮಾತ್ರ) ಭಾಗವಹಿಸಬಹುದು.
2. ಆಯುಷ್ ರ್‍ಯಾಂಕ್ ಹೊಂದಿ ಯಾವುದೇ ಸೀಟು ಹಂಚಿಕೆಯಾಗದೇ ಇರುವ ಅಭ್ಯರ್ಥಿಗಳು ಮಾತ್ರ ಈ ಸುತ್ತಿನಲ್ಲಿ ಭಾಗವಹಿಸಬಹುದು. ಈಗಾಗಲೇ ಸೀಟನ್ನು ರದ್ದು ಪಡಿಸಿಕೊಂಡಿರುವವರೂ ಸಹ ಈ ಸುತ್ತಿನಲ್ಲಿ ಭಾಗವಹಿಸಬಹುದು.
3. ವೈದ್ಯಕೀಯ / ದಂತ ವೈದ್ಯಕೀಯ / ಇಂಜಿನಿಯರಿಂಗ್ / ಕೃಷಿ ವಿಜ್ಞಾನ ಮುಂತಾದ ಸೀಟುಗಳಿಗೆ ಕಾಲೇಜಿನಲ್ಲಿ ಪ್ರವೇಶ ಪಡೆದವರು ಈ ಸುತ್ತಿನಲ್ಲಿ ಭಾಗವಹಿಸಲು ಅರ್ಹರಿರುವುದಿಲ್ಲ.
4. ಈ ಸುತ್ತಿನಲ್ಲಿ ಭಾಗವಹಿಸಲು ಆಸಕ್ತ ಇರುವ ಅರ್ಹ ಅಭ್ಯರ್ಥಿಗಳು ಹೊಸದಾಗಿ ಇಚ್ಛೆ / ಆಯ್ಕೆಗಳನ್ನು ದಾಖಲಿಸಬೇಕು. ಈ ಮೊದಲು ದಾಖಲಿಸಿದ್ದ ಇಚ್ಛೆ / ಆಯ್ಕೆಗಳನ್ನು ಪರಿಗಣಿಸಲಾಗುವುದಿಲ್ಲ. (ಆಯುಷ್ ಕೋರ್ಸುಗಳಿಗೆ Choice-2 ನೀಡಿರುವ ಅಭ್ಯರ್ಥಿಗಳನ್ನು ಹೊರತುಪಡಿಸಿ)

**ಗಮನಿಸಿ:** ಈ ಸುತ್ತಿನಲ್ಲಿ ಸೀಟು ಹಂಚಿಕೆಯಾದಲ್ಲಿ ಯಾವುದೇ ಕಾರಣಕ್ಕೂ ಬದಲಾಯಿಸುವುದಕ್ಕೆ ಅಥವಾ ರದ್ದುಪಡಿಸಿಕೊಳ್ಳುವುದಕ್ಕೆ ಅವಕಾಶವಿರುವುದಿಲ್ಲ. ಆದ್ದರಿಂದ ಅಭ್ಯರ್ಥಿಗಳು ಇಚ್ಛೆ / ಆಯ್ಕೆಗಳನ್ನು ದಾಖಲಿಸುವ ಮೊದಲು ಪೋಷಕರೊಡನೆ ಚರ್ಚಿಸಿ ಇಚ್ಛೆ / ಆಯ್ಕೆಗಳನ್ನು ದಾಖಲಿಸಲು ಸೂಚಿಸಿದೆ. ಅಭ್ಯರ್ಥಿಗಳು ದಾಖಲಿಸುವ ಇಚ್ಛೆ / ಆಯ್ಕೆಗಳನ್ನು ಮತ್ತು ಮೆರಿಟ್ ಆಧಾರದ ಮೇಲೆ ಸೀಟು ಹಂಚಿಕೆಯನ್ನು ಮಾಡುವುದರಿಂದ ಅಭ್ಯರ್ಥಿಯು ಹಂಚಿಕೆಯಾದ ಸೀಟಿಗೆ ಕಡ್ಡಾಯವಾಗಿ ಕಾಲೇಜಿನಲ್ಲಿ ನಿಗದಿತ ದಿನಾಂಕದೊಳಗೆ ಪ್ರವೇಶ ಪಡೆಯಲು ಸೂಚಿಸಿದೆ.

ಪರಿಷ್ಕೃತ ವೇಳಾಪಟ್ಟಿ

| Sl. No. | Particulars | Date and Time |
|---|---|---|
| 01 | Display of Seat Matrix | 30-08-2019 after 2.30 pm |
| 02 | Fresh Option Entry by Eligible Candidates | From 1.00 pm on 04-09-2019 to 07-09-2019 up to 11.00 am |
| 03 | Publication of Seat Allotment Results | 07-09-2019 after 4.00 pm |
| 04 | Confirmation of Allotment, Payment of Fees and downloading of admission order | From 6.00 pm on 07-09-2019 to 11-09-2019 |
| 05 | Last date for reporting to colleges | 12-09-2019 before 5.30 pm |

ಹೆಚ್ಚಿನ ವಿವರಗಳಿಗಾಗಿ ಅಭ್ಯರ್ಥಿಗಳು ಪ್ರಾಧಿಕಾರದ ವೆಬ್‌ಸೈಟ್‌ಗೆ ಭೇಟಿ ನೀಡಲು ಸೂಚಿಸಿದೆ.

ಸಹಿ/-
ಕಾರ್ಯನಿರ್ವಾಹಕ ನಿರ್ದೇಶಕರು

18ನೇ ಅಡ್ಡ ರಸ್ತೆ, ಸಂಪಿಗೆ ರಸ್ತೆ, ಮಲ್ಲೇಶ್ವರಂ, ಬೆಂಗಳೂರು – 560 012
18th Cross, Sampige Road, Malleshwaram, Bengaluru – 560 012.
Phone: 080-2356 4583, 2336 1786, Fax: 080-2346 1576
e-mail : keauthority-ka@nic.in Website : http://kea.kar.nic.in